## ನಿಮ್ಮೊಡನೆ

# ಮಾದಕವಸ್ತು: ಬಹುಮುಖಿ ಚಿಂತನೆ ಅಗತ್ಯ

ಮಾದಕವಸ್ತು ವ್ಯಸನ ಒಂದು ಗಂಭೀರವಾದ ಸಾಮಾಜಿಕ ಸಮಸ್ಯೆ. ಇದರ ವ್ಯಾಪ್ತಿ ಯಾವುದೋ ಒಂದು ಪ್ರಾಂತ್ಯ, ಸಮುದಾಯ, ದೇಶಕ್ಕೆ ಸೀಮಿತವಾಗಿಲ್ಲ. ಈ ಪಿಡುಗಿನ ಕಬಂಧಬಾಹು ವಿಶ್ವದ ಮೂಲೆಮೂಲೆಗೂ ಚಾಚಿದೆ. ಇಂತಹ ಗಂಭೀರ ಸಮಸ್ಯೆಯೊಂದು ಬರೀ ಚಲನಚಿತ್ರ ರಂಗದ ಸಮಸ್ಯೆ ಎಂಬಂತೆ ನಮ್ಮಲ್ಲಿ ಈಗ ಚರ್ಚೆಗೆ ಒಳಗಾಗಿದೆ! ಇಲ್ಲಿ ಯಾವ ಸಮಸ್ಯೆಯೂ ಅದರ ಎಲ್ಲ ಆಯಾಮಗಳೊಂದಿಗೆ ಚರ್ಚೆಗೆ ಒಳಪಡುವುದಿಲ್ಲ, ಪರಿಹಾರೋಪಾಯಗಳ ಶೋಧಕ್ಕೆ ಇಳಿಯುವುದಿಲ್ಲ ಎಂಬುದಕ್ಕೆ ಇದು ಮತ್ತೊಂದು ಉದಾಹರಣೆ.

ಸಿನಿಮಾ ನಟ–ನಟಿಯರೋ ತಂತ್ರಜ್ಞರೋ ಆಗಿರುವ ಒಂದೇ ಕಾರಣಕ್ಕೆ ಯಾರೊಬ್ಬರೂ ಮಾದಕವಸ್ತು ವ್ಯಸನಿಯಾಗಿರುವುದಿಲ್ಲ ಅಥವಾ ಅವರು ಈ ಕ್ಷೇತ್ರಕ್ಕೆ ಬಾರದೇ ಇದ್ದಿದ್ದರೆ ಮಾದಕ ವಸ್ತುಗಳಿಂದ ದೂರ ಇರುತ್ತಿದ್ದರು ಎಂಬುದಕ್ಕೆ ಯಾವ ಪುರಾವೆಯೂ ನಮ್ಮ ಬಳಿ ಇಲ್ಲ. ಕೈಯಲ್ಲಿ ಹಣ ಹೆಚ್ಚಿಗೆ ಓಡಾಡುವಂತಹ ಹಾಗೂ ಒಂದಷ್ಟು ತಾರಾವರ್ಚಸ್ಸು ಹೊಂದಿರುವಂತಹ ಕ್ಷೇತ್ರಗಳಲ್ಲಿ ಚಿತ್ರರಂಗವೂ ಒಂದು ಎಂಬುದನ್ನು ಬಿಟ್ಟರೆ ಬೇರೆ ಯಾವ ಕಾರಣಕ್ಕೂ ಅದನ್ನು ಪ್ರತ್ಯೇಕ ದ್ವೀಪವೆಂಬಂತೆ– ಸಕಾರಾತ್ಮಕ ಇಲ್ಲವೇ ನಕಾರಾತ್ಮಕ ನೆಲೆಯಲ್ಲಿ– ನೋಡಬೇಕಾದ ಅಗತ್ಯ ಇಲ್ಲ. ಹಾಗಿರುವಾಗ ಚಿತ್ರರಂಗ ಮತ್ತು ಡ್ರಗ್ಸ್ ಚಟವನ್ನು ಒಟ್ಟಿಗೆ ಇರಿಸಿ ಮಾತನಾಡುವುದರಲ್ಲಾಗಲೀ ಅಥವಾ ಕೆಲವರ ವಿರುದ್ಧ ಕೂರಂಬುಗಳನ್ನು ಬಿಡುವುದರಲ್ಲಾಗಲೀ ಅರ್ಥವಿಲ್ಲ. ಗ್ಲಾಮರ್ ಜಗತ್ತು; ಓದುಗರು ಅಥವಾ ನೋಡುಗರ ಗಮನ ಸೆಳೆಯುತ್ತದೆ ಎಂಬುದೇ ಪ್ರಧಾನ ಅಂಶವಾಗಿ ಈ ವಿದ್ಯಮಾನವು ಅತಿರಂಜಿತಗೊಂಡಿದ್ದರೆ ಅದರ ಫಲಶ್ರುತಿಯೂ ವ್ಯಾಪಾರಿ ಸಿನಿಮಾವೊಂದು ಬೀರುವ ಪರಿಣಾಮಕ್ಕಿಂತ ಹೆಚ್ಚಿನದು ಆಗಿರುವ ಸಾಧ್ಯತೆ ಕಡಿಮೆ.

ವ್ಯಸನವು ಮನುಷ್ಯನ ದೌರ್ಬಲ್ಯಗಳಲ್ಲಿ ಒಂದು. ಅದು ಕಾಲದೇಶಗಳನ್ನು ಮೀರಿದ್ದು. ಮದ್ಯ, ಮಾದಕವಸ್ತು, ಬೀಡಿ–ಸಿಗರೇಟು... ಈ ಎಲ್ಲವೂ ಇದರ ಬೇರೆ ಬೇರೆ ರೂಪಗಳು. ಪರಿಣಾಮದಲ್ಲಿ ತೀವ್ರವಾದ ವ್ಯತ್ಯಾಸವಿದ್ದರೂ ಮೂಲ ಉದ್ದೇಶ ಒಂದೇ – ಅಮಲು ಬರಿಸಿಕೊಳ್ಳುವುದು. ಇನ್ನೂ ಒಂದು ವ್ಯತ್ಯಾಸ ಇದೆ: ಕೆಲವು ನಿಷೇಧಕ್ಕೆ ಒಳಗಾಗಿರುತ್ತವೆ, ಇನ್ನು ಕೆಲವು ಉತ್ಪನ್ನಗಳಿಗೆ ‘ಆರೋಗ್ಯಕ್ಕೆ ಹಾನಿಕಾರಕ’ ಎಂಬ ಶಾಸನಬದ್ಧ ಎಚ್ಚರಿಕೆಯೊಂದಿಗೆ ಬಳಕೆಗೆ ಅವಕಾಶ ಇರುತ್ತದೆ. ಮಾದಕವಸ್ತು ಮೊದಲನೆಯ ವರ್ಗಕ್ಕೆ ಸೇರಿರುವುದರಿಂದಾಗಿ ಸುದ್ದಿಯ ಒಡಲಲ್ಲಿ ಒಂದು ಸ್ಫೋಟಕ ಆಯಾಮ ಹುದುಗಿರುತ್ತದೆ. ನಿಷೇಧದ ಕಾರಣದಿಂದಲೇ ಮಾದಕವಸ್ತುಗಳ ದರ ವಿಪರೀತ ದುಬಾರಿಯಾಗಿ, ಅದು ದಂಧೆಯ ಸ್ವರೂಪ ಪಡೆದಿದೆ. ಕಳ್ಳಸಾಗಣೆ ಮಾಫಿಯಾ ಸೃಷ್ಟಿಯಾಗಿದೆ. ಭೂಗತ ಜಗತ್ತಿನ ಜೊತೆಗೂ ನಂಟು ಬೆಸೆದಿದೆ.

ಈ ಸಮಸ್ಯೆಯ ಬಗ್ಗೆ ಚರ್ಚಿಸುವಾಗ ಒಂದು ವಿಷಯದಲ್ಲಿ ಸ್ಪಷ್ಟತೆ ಬಹಳ ಮುಖ್ಯ. ಮಾದಕವಸ್ತು ವ್ಯಸನಿಗಳೇ ಬೇರೆ, ದಂಧೆಕೋರರೇ ಬೇರೆ. ಈ ಎರಡು ವರ್ಗಗಳ ನಡುವೆ ಸ್ಪಷ್ಟವಾದ ಗೆರೆ ಎಳೆಯುವುದು ಅಗತ್ಯ. ವ್ಯಸನಿಗಳು ಉಳ್ಳವರಾಗಿರಲೀ ಬಡವರಾಗಿರಲೀ ನಟರಾಗಿರಲೀ ಉದ್ಯಮಿಗಳಾಗಿರಲೀ ಅಂಥವರಿಗೆ ಬೇಕಾಗಿರುವುದು ಸಾಮಾಜಿಕ ಸಾಂತ್ವನ, ಸಹಾನುಭೂತಿ. ವ್ಯಸನದಿಂದ ಬಿಡಿಸುವ ಮಾರ್ಗಗಳ ಕುರಿತು ಸಮಾಜ ಯೋಚಿಸಬೇಕು. ವ್ಯಸನಕ್ಕೆ ಒಳಗಾದವರನ್ನು ಅಪರಾಧಿಗಳಂತೆ ನೋಡುವುದರಿಂದ, ಪ್ರಖ್ಯಾತರಾಗಿದ್ದರೆ ಅವರ ಹೆಸರಿಗೆ ಕಳಂಕ ಹಚ್ಚುವುದರಿಂದ, ಉತ್ಪಾದಕ ನೆಲೆಯಲ್ಲಿ ಪ್ರಯೋಜನಕ್ಕಿಂತ ಹಾನಿಯೇ ಹೆಚ್ಚು. ಹಾಗೆ ನೋಡುವುದರ ಪರಿಣಾಮವಾಗಿ ವ್ಯಕ್ತಿಯ ಮತ್ತು ಆತನ ಕುಟುಂಬದ ಸಮಸ್ಯೆ ಇನ್ನಷ್ಟು ಜಟಿಲಗೊಳ್ಳಬಹುದೇ ವಿನಾ ಪರಿಹಾರ ಸಿಗುವುದಿಲ್ಲ. ಪೆಡ್ಲರ್ಸ್ ವಿರುದ್ಧ ಕಾನೂನಿನ ಕಠಿಣ ಅಸ್ತ್ರ ಝಳಪಿಸಬೇಕು. ನಿಯಂತ್ರಣಕ್ಕೆ ಬೇಕಾದ ಕಾರ್ಯತಂತ್ರಗಳನ್ನು ಹೆಚ್ಚು ಹೆಚ್ಚು ಬಿಗಿಗೊಳಿಸಬೇಕು.

ಹದಿಹರೆಯದಲ್ಲಿ ಸಹವಾಸದೋಷದಿಂದ ಯಾವುದೋ ಕೆಟ್ಟ ಗಳಿಗೆಯಲ್ಲಿ ಇಂತಹ ಅಭ್ಯಾಸಕ್ಕೆ ತೆರೆದುಕೊಂಡವರು ಕ್ರಮೇಣ ಮಾದಕವಸ್ತುಗಳ ದಾಸರಾಗುವ ಸಾಧ್ಯತೆ ಇದೆ. ಕಾರಣಗಳನ್ನು ನಿರ್ದಿಷ್ಟವಾಗಿ ಪಟ್ಟಿ ಮಾಡಲಾಗದಿದ್ದರೂ ಜೀವನಶೈಲಿ– ಸುತ್ತಲಿನ ಪರಿಸರದ ಪ್ರಭಾವ, ಒತ್ತಡದ ಬದುಕು, ಒಂಟಿತನ, ಹತಾಶೆ, ಕೌಟುಂಬಿಕ ಸಮಸ್ಯೆಗಳು... ಈ ಎಲ್ಲವುಗಳ ಪಾತ್ರ ಇದ್ದೇ ಇದೆ. ಮಕ್ಕಳ ಲಾಲನೆ–ಪಾಲನೆಯ ವಿಷಯದಲ್ಲಿ ಪೋಷಕರು ಹೆಚ್ಚು ಎಚ್ಚರ ವಹಿಸಬೇಕಾದ ದಿನಮಾನಗಳಿವು. ಬೆಂಗಳೂರಿನಂತಹ ಮಹಾನಗರಗಳ ಶಾಲೆಗಳ ಸಮೀಪ ಎಲ್ಲಾದರೂ ಹುಕ್ಕಾ ಬಾರ್ ಇದ್ದರೆ ಒಂದು ಕ್ಷಣ ಅಲ್ಲಿ ನಿಂತು ಒಳಗೆ ಹೋಗುವ ಮುಖಗಳನ್ನು ಒಮ್ಮೆ ಗಮನಿಸಿದರೆ, ಖಂಡಿತ ಬೆಚ್ಚಿಬೀಳುವಿರಿ. ಸಮವಸ್ತ್ರಧಾರಿ ಮಕ್ಕಳು ಸಾಲುಗಟ್ಟಿರುತ್ತಾರೆ! ಮಾದಕವಸ್ತುಗಳ ಸೆಳೆತಕ್ಕೆ ಹೆಚ್ಚಿಗೆ ಒಳಗಾಗುವುದೂ ಯುವಪೀಳಿಗೆಯೇ. ಕಾಲೇಜುಗಳ ಆಸುಪಾಸಿನ ಪ್ರದೇಶ, ವಿದ್ಯಾರ್ಥಿ ನಿಲಯಗಳು, ಪಬ್–ಬಾರ್‌ಗಳಂಥವು ಇದಕ್ಕೆ ಬಳಕೆಯಾಗುವ ಸಾಧ್ಯತೆ ಇದೆ. ವ್ಯಸನಮುಕ್ತರಾಗಿಸಲು ಬೇಕಾದ ಚಿಕಿತ್ಸಾ ಸೌಕರ್ಯ ಹೆಚ್ಚಿಸುವುದರ ಜೊತೆಗೆ ಚಿಕಿತ್ಸೆಗೆ ಒಳಗಾಗಲು ಮನವೊಲಿಸುವ ಕೆಲಸವೂ ನಮ್ಮಲ್ಲಿ ಆಗಬೇಕಾಗಿದೆ. ಈ ದಿಸೆಯಲ್ಲಿ ಸಮುದಾಯ ಕೂಡ ಮಹತ್ವದ ಪಾತ್ರ ವಹಿಸಬೇಕಾಗಿದೆ.

■ ಎನ್. ಉದಯಕುಮಾರ್

ಮಾದಕ ವ್ಯಸನಿಗಳೇ ಬೇರೆ, ದಂಧೆಕೋರರೇ ಬೇರೆ. ಈ ಎರಡು ವರ್ಗಗಳ ನಡುವೆ ಸ್ಪಷ್ಟವಾದ ಗೆರೆ ಎಳೆಯುವುದು ಅಗತ್ಯ. ವ್ಯಸನಿಗಳು ಉಳ್ಳವರಾಗಿರಲೀ ಬಡವರಾಗಿರಲೀ ನಟರಾಗಿರಲೀ ಅಂಥವರಿಗೆ ಬೇಕಾಗಿರುವುದು ಸಾಮಾಜಿಕ ಸಾಂತ್ವನ, ಸಹಾನುಭೂತಿ. ವ್ಯಸನದಿಂದ ಬಿಡಿಸುವ ಮಾರ್ಗಗಳ ಕುರಿತು ಸಮಾಜ ಯೋಚಿಸಬೇಕು.

